# " ಯುಗಾದಿ ಮರಳಿ ಬರುತಿದೆ "

□ ಶಶಿಕಲಾ ಶ್ರೀಧರ

ಯುಗಾದಿಯ ವೈಶಿಷ್ಟ್ಯವನ್ನೂ ಯಾವ ಮನೋಭಾವದಿಂದ ಅದನ್ನು ಆಚರಿಸಬೇಕೆಂಬುದನ್ನೂ ವಿವರಿಸಿರುವ ಶ್ರೀಮತಿ ಶಶಿಕಲಾ ಶ್ರೀಧರ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ

ಎಂದು ವರಕವಿ ವ.ರಾ.ಬೇಂದ್ರೆಯವರು ಅಂದು ಹಾಡಿದುದು ಪ್ರತಿ ಸಂವತ್ಸರದ ಪ್ರತಿ ಯುಗಾದಿಗೂ ನವನವೀನವಾಗಿ ಇಂಪಾಗಿದ್ದು ತಂಪನ್ನು ಉಂಟುಮಾಡುತ್ತಿದೆ. ಪ್ರತಿ ಭಾರತೀಯನಿಗೂ ಪ್ರಥಮ ಪರ್ವದಿನವೇ ಯುಗಾದಿ. ಇದು ನವವರುಷದ ಆರಂಭ. ಜೀವಿಗಳಲ್ಲಿ ಪರಸ್ಪರ ನವ ಚೇತನವನ್ನು ತುಂಬುವ ಅನುಬಂಧ.

ಚಳಿಗಾಲದ ಜಡತ್ವವನ್ನು ಕಳೆದು ಪ್ರಕೃತಿಯಲ್ಲೂ, ಪ್ರಕೃತಿಯ ಶಿಶುವಾದ ಮಾನವನಲ್ಲೂ ಚೈತನ್ಯ ತುಂಬುವ ನವ ವಸಂತ ಋತುವಿನ ಬರವನ್ನು ಯುಗಾದಿಯು ಸಂಭ್ರಮದಿಂದ ಸಾರುವುದನ್ನು ಮಾನವ ಯುಗಯುಗಗಳಿಂದ ಕಾಣುತ್ತಾ ಬರುತ್ತಿದ್ದಾನೆ. ಪ್ರಕೃತಿಯ ಈ ಹೊರಗಿನ ಬದಲಾವಣೆ, ಅದು ಸೂಸುತ್ತಿರುವ ಸಂತಸ ಮಾನವನಲ್ಲೂ ತತ್ಸಮಾನವಾದ ಭಾವವನ್ನು ಸ್ಫುರಿಸುತ್ತದೆ. ಕಳೆದ ದಿನಗಳ ಕಹಿ ನೆನಪುಗಳನ್ನೂ, ಸೋಲು ಸಂಕಟಗಳನ್ನೂ ಬದಿಗೆ ತಳ್ಳಿ ತನ್ನ ಮುಂದಿನ ದಿನಗಳ ಧ್ಯೇಯ ಸಾಧನೆಗಾಗಿ ಸ್ಫೂರ್ತಿಭರಿತ ಕಾರ್ಯಗಳಲ್ಲಿ ಪ್ರವೃತ್ತನಾಗುವ ಈ ಪವಿತ್ರ ಪರ್ವದಿನವೇ 'ಯುಗಾದಿ.' ಇಂದಿನಿಂದ ಮಾನವ ಹಳೆಯ ನಿರುತ್ಸಾಹವನ್ನು ತೊಡೆದುಹಾಕಿ ನವ ಉತ್ಸಾಹದಿಂದ ತುಂಬಿ ಹೊಸ ಜೀವನವನ್ನು ರೂಪಿಸಿಕೊಳ್ಳಲು ಉದ್ಯುಕ್ತನಾಗುತ್ತಾನೆ.

ಚಾಂದ್ರಮಾನ ಯುಗಾದಿಯ ತಿಥಿ ಚೈತ್ರ ಶುದ್ಧ ಪ್ರತಿಪದೆ. **ಋತೂನಾಂ ಕುಸುಮಾಕರಃ** (ಋತುಗಳಲ್ಲಿ ನಾನು ಕುಸುಮಾಕರನು) ಎಂದು ಶ್ರೀಕೃಷ್ಣ ಪರಮಾತ್ಮನು, ವಸಂತವು ತನ್ನ ವಿಭೂತಿಗಳಲ್ಲಿ ಒಂದು ಎಂದು ಅದರ ಶ್ರೇಷ್ಠತೆಯನ್ನು ಹೇಳುತ್ತಾನೆ. ಋತುಗಳ ರಾಜ ವಸಂತನ ಆಗಮನವಾಗುವಾಗ ಯುಗಾದಿ ಆಚರಿಸಲ್ಪಡುವುದು. ಚಳಿಗಾಲದ ಮೈಕೊರೆಯುವ ಆಲಸ್ಯವನ್ನೂ ಜಡತ್ವವನ್ನೂ ಉಂಟುಮಾಡುವ ಕೊರೆತವಿಲ್ಲದ, ಬೇಸಿಗೆಯ ಸುಡುಬಿಸಿಲು ಇನ್ನೂ ಪ್ರಾರಂಭವಾಗದ, ಮಳೆಗಾಲದ ಜಡಿಮಳೆಯ ಬೇಸರವಿಲ್ಲದ ಈ ನವವಸಂತ ನಿಜವಾಗಿಯೂ ನಗುನಗುತ್ತಾ ಬರುತ್ತದೆ ಹಾಗೂ ಎಲ್ಲ ಜೀವರಿಗೂ ತಂಪನ್ನೂ ಸಂತಸವನ್ನೂ ನೀಡುತ್ತದೆ.

## ಚೈತ್ರಶುದ್ಧ ಪ್ರತಿಪದೆಯ ದಿನವೇ ಏಕೆ ?

ಯುಗಾದಿ ಹಬ್ಬವು ಪ್ರತಿವರ್ಷವೂ ಚಾಂದ್ರಮಾನದ ಅನುಸಾರ ಚೈತ್ರಮಾಸದ ಶುಕ್ಲಪಕ್ಷದ ಪ್ರತಿಪದೆಯಂದೇ ಆಚರಿಸಲ್ಪಡುವುದು ರೂಢಿಯಲ್ಲಿದೆ. ಇದರ ವಿಚಾರವಾಗಿ ಅನೇಕ ಹಿರಿಯರ, ಗಣ್ಯರ ಅನಿಸಿಕೆ ಹೀಗಿದೆ:

ಜಗತ್ತಿನ ಎಲ್ಲ ಜ್ಯೋತಿಷಿಗಳಿಗೂ, ಖಗೋಳ ಶಾಸ್ತ್ರಜ್ಞರಿಗೂ ಮಾರ್ಚ್ ೨೧ ಬಹಳ ಮುಖ್ಯವಾದ ದಿನ. ಕಾರಣ ಅಂದು ಹಗಲು ರಾತ್ರಿಗಳೆರಡೂ ಸಮನಾಗಿರುತ್ತವೆ. ಈ ದಿನವನ್ನು ವಿಷುವತ್ತು (Equinox) ಎಂದು ಕರೆಯುತ್ತಾರೆ. ಅಂದು ಒಂದು ವಿಶಿಷ್ಟಕೋನದಲ್ಲಿ ಸೂರ್ಯ ಮತ್ತು ಭೂಮಿ ಬರುತ್ತವೆ. ಅಲ್ಲದೆ ಅಂದು ಗುರು ಮಂಗಳ ಶನಿ ಮುಂತಾದ ಗ್ರಹಗಳು ಭೂಮಿಯ ಯಾವ ಯಾವ ದಿಕ್ಕಿನಲ್ಲಿ ಎಷ್ಟೆಷ್ಟು ಸನಿಹ ಅಥವಾ ದೂರವಿರುತ್ತವೋ ಅವುಗಳ ಸಹಾಯದಿಂದ ಆ ವರ್ಷದ ಮಳೆ ಬೆಳೆ ಆಗುಹೋಗುಗಳ ಬಗೆಗೆ ಕರಾರುವಾಕ್ಕಾಗಿ ಹೇಳಲು ಜ್ಯೋತಿಷ್ಯಕಾರರಿಗೆ ಸಾಧ್ಯವಾಗುವುದು.

ಮತ್ತೊಂದು ಸೂಕ್ತದ ಪ್ರಕಾರ ಯುಗಾದಿ ಎಂದರೆ ಸೃಷ್ಟಿಯ ಆದಿ– ಬ್ರಹ್ಮನು ಜಗತ್‌ಸೃಷ್ಟಿಕಾರ್ಯವನ್ನು ಪ್ರಾರಂಭಿಸಿದ ಪರ್ವಕಾಲ ಅಂದಿನಿಂದಲೇ ದಿನ, ವಾರ, ಪಕ್ಷ, ಮಾಸ, ಋತು ಸಂವತ್ಸರಗಳೂ, ಪ್ರತಿ ಸಂವತ್ಸರಕ್ಕೂ ಸಂವತ್ಸರಾಧಿಪರೂ ಇತ್ಯಾದಿಗಳ ಗಣನೆ ಪ್ರಾರಂಭವಾಯಿತು. ಆಯಾ ವರ್ಷ ವಿಶಿಷ್ಟ ಗ್ರಹಗಳು ಇರುವ ಸ್ಥಾನ ಕಾಲ ಮುಂತಾದುವುಗಳ ಪರಿಣಾಮವಾಗಿ ಹಾಗೂ ಅವು ಬೀರುವ ಪ್ರಭಾವಕ್ಕನುಗುಣವಾಗಿ ವಿಶಿಷ್ಟ ಗ್ರಹವನ್ನು ಆ ವರ್ಷಕ್ಕೆ ಅಧಿಪನೆಂದೂ ಮುಖ್ಯಾಧಿಕಾರಿ ಎಂದೂ ಕರೆಯುವ ಪರಿಪಾಠ ಜ್ಯೋತಿಷ್ಯ ಶಾಸ್ತ್ರದಲ್ಲಿದೆ.

ಭಾಸ್ಕರಾಚಾರ್ಯರ ಅಭಿಪ್ರಾಯದಲ್ಲೂ ಚೈತ್ರಶುದ್ಧ ಪ್ರತಿಪದೆಯೇ ಯುಗಾರಂಭದ ದಿನ. ಅಂದು ಲಂಕಾನಗರದ ಹಾಗೂ ಭಾರತದ ಮಧ್ಯರೇಖೆಯ ಮೇಲೆ ಸೂರ್ಯನ ಕಿರಣಗಳು ನೇರ ಬೀಳುವುದರಿಂದ ಆ ದಿನ 'ಯುಗಾದಿ' ಎಂದು ಕರೆಸಿಕೊಳ್ಳುವುದು.

ಚಾಂದ್ರಮಾನ ಯುಗಾದಿಯು ವಿಷುವತ್ ಸಂಕ್ರಾಂತಿಯ ದಿನಕ್ಕೆ ಹತ್ತಿರವಾಗಿ ಬರುವುದೊಂದು ವಿಶೇಷ. ಪಾಶ್ಚಾತ್ಯ ದೇಶದಲ್ಲೂ ಜನವರಿ ಮೊದಲನೇ ತೇದಿಯನ್ನು ಹೊಸವರ್ಷದ ಆರಂಭದ ದಿನವೆಂದು ಪರಿಗಣಿಸಲು ಕಾರಣವನ್ನು ವಿವರಿಸುತ್ತಾ ಒಬ್ಬ ರೋಮ್ ದೇಶದ ಸಾಹಿತಿ ಹೇಳಿರುವುದು ಅರ್ಥಪೂರ್ಣವಾಗಿದೆ:

"ಡಿಸೆಂಬರ್ ತಿಂಗಳವರೆಗೆ ಮೈಮನಗಳನ್ನು ಕುಗ್ಗಿಸುವ ಶೀತಲ ಹಿಮಗಾಳಿ ಹಿಮಪಾತಗಳಿಂದಾಗಿ ಬೆಂಡಾದ ಜೀವನಕ್ಕೆ ವಸಂತಾಗಮನದ ಸೂಚನೆಯೊಡನೆ ಹೊಂಗಿರಣಗಳನ್ನು ಸೂಸುವ ಸೂರ್ಯಪ್ರಭೆಯು ಪ್ರಕೃತಿಯಲ್ಲಿ ಸೊಬಗನ್ನೂ ಮಾಧುರ್ಯವನ್ನೂ ತುಂಬುವುದರೊಡನೆ ಮಾನವನ ಮನದಲ್ಲಿ ಆಶಾಪಾವಿತ್ರ್ಯ, ಉತ್ಸಾಹ ಲವಲವಿಕೆಗಳನ್ನು ಬಿತ್ತುವುದು."

ಮತ್ತೊಂದು ವಿಶೇಷವೆಂದರೆ ಭಾರತದಲ್ಲಿ ಪ್ರತಿಯೊಂದು ಉತ್ಸವ ಸಮಾರಂಭಗಳೊಡನೆ ಯಾವುದಾದರೂ ವಿಶಿಷ್ಟ ದೇವತೆಗಳ ಸಂಬಂಧವಿದ್ದೇ ಇರುತ್ತದೆ. ಈ ಹಬ್ಬಗಳು ಕೇವಲ ತಿಂದುಟ್ಟು ನಲಿಯುವ ದಿನಗಳಷ್ಟೇ ಎನಿಸಿಕೊಳ್ಳದೆ, ಈ ಭಾಗ್ಯವನ್ನು ಕರುಣಿಸಿದ ಭಗವಂತನನ್ನು ಭಕ್ತಿಯಿಂದ ಪೂಜಿಸುವ ಅರ್ಥಪೂರ್ಣವಾದ ಸಂಪ್ರದಾಯಗಳನ್ನು ಹೊಂದಿದೆ. ಅಂತೆಯೇ ಯುಗಾದಿಯಂದು ಭಾಗ್ಯದೇವತೆ ಲಕ್ಷ್ಮಿಯನ್ನು ಕಳಶರೂಪದಲ್ಲಿ ಪೂಜಿಸುವ ಪದ್ಧತಿ ಮಹಾರಾಷ್ಟ್ರವೇ ಮೊದಲಾದ ಹಲವು ಪ್ರದೇಶಗಳಲ್ಲಿದೆ. ಇದನ್ನು 'ಗುಡಿಪಾಡ್ಯಮಿ' ಎಂದು ಕರೆಯುತ್ತಾರೆ. ಒಂದು ಕೋಲಿಗೆ ಕಳಶವನ್ನೂ ಹೊಸಬಟ್ಟೆಯನ್ನೂ ಬೇವಿನ ಹೂ ಎಲೆಗಳೊಡನೆ ಕಟ್ಟಿ ಮನೆಯ ಮುಂಭಾಗದಲ್ಲಿ ಸ್ಥಾಪಿಸುತ್ತಾರೆ.

ಅಲ್ಲದೆ ಶ್ರೀರಾಮನು ಅಮಾವಾಸ್ಯೆಯಂದು ರಾವಣನನ್ನು ಸಂಹರಿಸಿ ಚೈತ್ರಶುದ್ಧ ಪ್ರತಿಪದೆಯಂದು ಲಂಕಾಪ್ರವೇಶ ಮಾಡಿ ಸೀತೆಯನ್ನು ಕರೆತಂದದ್ದು ಎಂಬ ಪ್ರತೀತಿಯೂ ಉಂಟು. ಮಾನವ ಅಧರ್ಮದ ಹಾದಿಗಿಳಿದು ರಾವಣನಾಗದಂತೆ ಎಚ್ಚರಿಸುತ್ತದೆ ಈ ಪರ್ವ. ಇದಕ್ಕನುಸಾರವಾಗಿ ಅಂದು ರಾಮೋಪಾಸನೆ ರಾಮಾಯಣ ಪಠನ ಮಾಡುವ ಪದ್ಧತಿಯೂ ಇದೆ. ಕೆಲವರು ಯುಗಾದಿಯಂದು ಪ್ರಾರಂಭಿಸಿ ಅಂದಿನಿಂದ ಒಂಭತ್ತು ದಿನಗಳಲ್ಲಿ ಬರುವ ಶ್ರೀರಾಮನವಮಿಯವರೆಗೆ ರಾಮಾಯಣ ಪಾರಾಯಣ ಮಾಡುವುದೂ ಉಂಟು.

ಸಾಮಾನ್ಯವಾಗಿ ಯುಗಾದಿಯಂದು ಪ್ರಾತಃಕಾಲದಲ್ಲೆದ್ದು, ಅಭ್ಯಂಗಸ್ನಾನ ಮಾಡಿ, ನವ ವಸ್ತ್ರಾಭರಣಗಳನ್ನು ಧರಿಸಿ, ದೇಶದಲ್ಲೆಲ್ಲಾ ಸುಭಿಕ್ಷೆ ಶಾಂತಿ ಆರೋಗ್ಯಗಳು ನೆಲೆಸಿ ಸರ್ವರೂ ಸುಖದಿಂದಿರುವಂತೆ ಅನುಗ್ರಹಿಸಲು ಭಗವಂತನನ್ನು ಪ್ರಾರ್ಥಿಸಿ, ಬಂಧುಮಿತ್ರರೆಲ್ಲರೂ ಒಂದೆಡೆ ಸೇರಿ ಸಿಹಿಯೂಟ ಮಾಡಿ ಸಂತಸ ಪಡುವುದು ಮತ್ತು ಇಡೀ ವರ್ಷದ ಆಗುಹೋಗುಗಳ, ವರ್ಷಾಧಿಪತಿಯರ ಬಗ್ಗೆ ಮಾಹಿತಿಯನ್ನೊದಗಿಸುವ ಪಂಚಾಂಗ ಶ್ರವಣಮಾಡುವುದು ಹಬ್ಬದ ಒಂದು ಅಂಗ.

## ಬೇವು-ಬೆಲ್ಲ : ನೋವು-ನಲಿವು

ಈ ವಸಂತ ಋತುವಿನ ಮುನ್ನ ಚಳಿಗಾಲವೂ, ಅನಂತರ ಬೇಸಿಗೆಯೂ, ಬೇಸಿಗೆ ಕಳೆಯುತ್ತಲೇ ಮಳೆಗಾಲವೂ ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳು. ಇದರಂತೆಯೇ ಮಾನವನ ಬಾಳಿನಲ್ಲಿಯೂ ಬೇಸಿಗೆಯಂತಹ ತಾಪದಾಯಕ ಪ್ರಸಂಗಗಳೂ, ಮಳೆಗಾಲದ ಸಿಡಿಲಿನಂತಹ ಅನಿರೀಕ್ಷಿತ ಆಘಾತಗಳೂ, ಚಳಿಗಾಲದ ಕೊರೆತದಂತಹ ದುರ್ಭರ ಪ್ರಸಂಗಗಳೂ ಸನ್ನಿವೇಶಗಳೂ ಬರುವುವು. ಪ್ರಕೃತಿಯಲ್ಲಿ ಹೇಗೋ ಹಾಗೆಯೇ ಬದುಕಿನಲ್ಲಿ ಎಲ್ಲವೂ ಸುಗಮವಾಗಿಯೂ ಸುಮಧುರವಾಗಿಯೂ, ಸುಖಮಯವಾಗಿಯೂ ಇರುವುದಿಲ್ಲ. ಕಷ್ಟ ಸುಖಗಳು ಏರುಪೇರುಗಳು ಬಡವನಿಗೂ ಅತಿ ಶ್ರೀಮಂತನಿಗೂ ರಾಜಮಹಾರಾಜರುಗಳಿಗೂ ತಪ್ಪಿದ್ದಲ್ಲ. ಇವೆಲ್ಲವೂ ಮಾನವನ ಬೆಳವಣಿಗೆಗೆ ಸಹಾಯ ಮಾಡುವುವು. ಆದ್ದರಿಂದ ನೋವು ನಲಿವುಗಳೆರಡನ್ನೂ ನೈಸರ್ಗಿಕವಾಗಿ, ಸಹಜವಾಗಿ ಎಲ್ಲರಿಗೂ ಬರುವ ವಿಷಯಗಳೆಂದು ಸಮಾನಭಾವದಿಂದ ಮಾನವ ಪರಿಗ್ರಹಿಸಬೇಕು. ಸುಖಬಂದಾಗ ಹಿಗ್ಗದೆ ನೋವಿನಲ್ಲಿ ಕುಗ್ಗದೆ ಇವೆರಡನ್ನೂ ಸಮಾನವಾಗಿ ಎದುರಿಸುವ ಶಕ್ತಿಯನ್ನು ಕರುಣಿಸಲು ಭಗವಂತನಲ್ಲಿ ಪ್ರಾರ್ಥಿಸುವುದೇ ಯುಗಾದಿಯ ವೈಶಿಷ್ಟ್ಯ.

## ಸರ್ವೇ ಜನಾಃ ಸುಖಿನೋ ಭವಂತು

ಈ ಯುಗಾದಿ ಹಬ್ಬವನ್ನು ಮತ್ತೂ ಸುಂದರವಾಗಿ ಆಚರಿಸಬೇಕೆಂದಿದ್ದರೆ ಭಕ್ಷ್ಯಭೋಜ್ಯಗಳನ್ನು ಮೆಲ್ಲುವಾಗ ತಮ್ಮ ತಮ್ಮ ಮನೆಗಳ ಸುತ್ತಮುತ್ತ ಸಮೀಪದಲ್ಲಿ ಆಹಾರಕ್ಕಾಗಿ ಪರಿತಪಿಸುವ ಜನರಿದ್ದಲ್ಲಿ ಅವರಿಗೂ ಅದರಲ್ಲಿ ಸ್ವಲ್ಪ ಪಾಲು ನೀಡುತ್ತಾ, ತಾವು ಆರಾಧಿಸುತ್ತಿರುವ ಇಷ್ಟದೇವತೆಯೇ ಈ ರೂಪದಲ್ಲಿ ಬಂದು ಸೇವೆಯನ್ನು ಸ್ವೀಕರಿಸುತ್ತಿದ್ದಾನೆ ಎಂದು ಭಾವಿಸಿದರೆ ಅದು ನಿಜ ಅರ್ಥದಲ್ಲಿ "ನಾರಾಯಣ ಸೇವೆ" ಎನ್ನಿಸುವುದು.

ಇದರಂತೆಯೇ ಹೊಸ ಉಡುಪನ್ನು ಧರಿಸುವಾಗ ಲೋಭ ಕ್ರೋಧಮಾತ್ಸರ್ಯಗಳೆಂಬ ಹಳೆಯ ಉಡುಪನ್ನು ಕಳಚಿ ಪರಮಾತ್ಮನ ಪ್ರಸಾದರೂಪವಾಗಿ ನವವಸ್ತ್ರಧಾರಣೆ ನಡೆಯಬೇಕು. ವಸ್ತ್ರಧಾರಣೆ ಸಭ್ಯತೆಯ ದ್ಯೋತಕವೇ ಹೊರತು ಸಿರಿವಂತಿಕೆಯ ಪ್ರದರ್ಶನಕ್ಕಾಗಿ ಅಲ್ಲ ಎಂಬ ಸತ್ಯಾಂಶ ಮನಸ್ಸಿನಲ್ಲಿ ಸದಾ ಜಾಗೃತವಾಗಿರಬೇಕು. ಅದಕ್ಕಾಗಿ ದುಂದು ವೆಚ್ಚ ಸಲ್ಲದು. ಅದೇ ದುಡ್ಡನ್ನು ಅಥವಾ ವಸ್ತ್ರವನ್ನು ನಮಗಿಂತ ನತಭಾಗ್ಯರಿಗೆ ನೀಡಿದರೆ ಅವರು ವರ್ಷವಿಡೀ ಚಳಿಗಾಳಿ ಬಿಸಿಲುಗಳಿಗೆ ಬರಿಮೈಯೊಡ್ಡಿ ನರಳುವುದನ್ನು ತಪ್ಪಿಸಬಹುದು.

ಹೀಗೆ ಯುಗಾದಿಯ ಶುಭಗಳಿಗೆಯಲ್ಲಿ ಉನ್ನತವಾದ ನಡಿಗೆಯೆಂಬ ಉತ್ತಮ ಬೀಜಗಳನ್ನು ಬಿತ್ತಿ, ವರ್ಷವಿಡೀ ನೀರೆರೆದು ಪೋಷಿಸುತ್ತಿದ್ದರೆ ಅವು ಮೊಳೆತು ಮರವಾಗಿ ಬದುಕಿಗೆ ಸಫಲತೆಯ ಫಲಗಳನ್ನು ನೀಡಬಲ್ಲವು, ಜನ್ಮವನ್ನು ಸಾರ್ಥಕ ಪಡಿಸಬಲ್ಲವು.

> ಕಳವಳವ ನೀಗಿಬಿಡು, ತಳಮಳವ ದೂರವಿಡು
> ಕಳೆ, ತಳ್ಳು, ಗಲಭೆ ಗಾಬರಿಯ ಮನದಿಂದ
> ಅಲೆದಾಡುತಿರೆ ದೀಪ ಕಣ್ಗೆ ಗುರಿ ತಪ್ಪುವುದು
> ತಿಳಿ ತಿಳಿವು ಶಾಂತಿಯಲಿ---ಮಂಕುತಿಮ್ಮ.

ಎಂಬ ಕವಿವರ ದಾರ್ಶನಿಕ ಡಿ.ವಿ.ಜಿ.ಯವರ ಆಶಯದಂತೆ, ಹೊಸ ಸಂವತ್ಸರವು ಎಲ್ಲರ ಬಾಳಿನಲ್ಲೂ ವಿವೇಕದ ಪ್ರಭೆಯನ್ನು ಮೂಡಿಸಿ ತಿಳಿವು ಎಂಬ ಶಾಂತಿಯನ್ನು ಕರುಣಿಸಲೆಂಬುದೇ ನಮ್ಮ "ಯುಗಾದಿಯ ಶುಭಾಶಯ"!

◆